


Rotary

विश्वमित्रः

ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

UNITE FOR GOOD
Rotary

Rtn. Francesco Arezzo
RI President 2025-26

Rtn. K. Palaksha
District Governor 2025-26

Rtn. Anand R.
President, Mob: 99800 93066

Rtn. Vishwas Y.
Secretary, Mob : 99800 63180

Rtn. M. Madhavachar
Bulletin Editor, Mob: 98862 73495

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 68 ಸಂಚಿಕೆ –24 ದಿನಾಂಕ : 24–12–2025

**ದಿನಾಂಕ: 24.12.2025ರ ಬುಧವಾರದಂದು ಖ್ಯಾತ ಕಥೆ, ಕವನ ಮತ್ತು ಅಂಕಣ ಬರಹಗಾರರಾದ ಹಾಗೂ ಸ್ಟೇಟ್ ಬ್ಯಾಂಕ್‌ನಲ್ಲಿ ಕಾರ್ಯ ನಿರ್ವಹಿಸಿ ನಿವೃತ್ತರಾಗಿರುವ ಶ್ರೀ ಕೆ.ಜಿ. ಕೃಷ್ಣಾನಂದರವರು ಮುಖ್ಯ ಅತಿಥಿಗಳಾಗಿ ಸಭೆಯಲ್ಲಿ ಭಾಗವಹಿಸಿದ್ದರು. ಶಿವಮೊಗ್ಗೆಯವರೇ ಆದ ಇವರು 'ಪ್ರಸಕ್ತ ವಿದ್ಯಮಾನಗಳು' ಎಂಬ ವಿಚಾರವಾಗಿ ಮಾತನಾಡಿದರು. ಇವರೊಂದಿಗೆ ವೇದಿಕೆಯಲ್ಲಿ ಕ್ಲಬ್‌ನ ಅಧ್ಯಕ್ಷರಾದ ರೊ.ಆರ್.ಆನಂದ್ ಮತ್ತು ಅಂದಿನ ಸಭಾ ಕಾರ್ಯದರ್ಶಿಯಾಗಿ, ಕ್ಲಬ್‌ನ ಸಹ ಕಾರ್ಯದರ್ಶಿ ರೊ ಶ್ರೀಕಾಂತ್ ನಾಡಿಗ್‌ರವರು ಉಪಸ್ಥಿತರಿದ್ದರು.**










ಆರಂಭದಲ್ಲಿ ಪಿ.ಹೆಚ್.ಎಫ್. ಶ್ರೀ ಜಿ. ಸತ್ಯನಾರಾಯಣರವರಿಂದ "ಅವತರಿಸು ಬಾ ನಾರಾಯಣ" ಎಂಬ ಗೀತೆಯ ಸುಶ್ರಾವ್ಯ ಗಾಯನದೊಂದಿಗೆ ಪ್ರಾರ್ಥನೆ. ರೊ. ಎಂ. ಮಾಧವಾಚಾರ್‌ರವರಿಂದ ಸ್ವಾಗತ. ರೊ.ಕೆ. ಸೂರ್ಯನಾರಾಯಣ ಉಡುಪರವರಿಂದ ಮುಖ್ಯ ಅತಿಥಿಗಳ ಪರಿಚಯವಾಯಿತು. ಶ್ರೀ.ಕೆ.ಜಿ. ಕೃಷ್ಣಾನಂದರವರು ತಮ್ಮ ಕಥೆ ಕವನ ಅಂಕಣ ಬರಹಗಳ ಮೂಲಕ ಜನತೆಗೆ ಪರಿಚಿತರು. ಇವರು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ವಿತ್ತೀಯ ಸಂಸ್ಥೆಯಲ್ಲಿ 35 ವರ್ಷಗಳ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಇವರ ಹಲವು ಬರಹಗಳು, ರಾಜ್ಯದ ಪ್ರತಿಷ್ಟಿತ ಸುಧಾ, ತರಂಗ ಮತ್ತಿತರ ಪತ್ರಿಕೆಗಳಲ್ಲಿ ಪ್ರಕಟವಾಗಿ ಬಹುಮಾನಗಳಿಸಿದ್ದಾರೆ. ಇವರ ಅಂಕಣ ಬರಹಗಳ ಗುಚ್ಚ "ಒಳಸುಳಿಯೊಳಗಿಳಿದು" ಪ್ರಕಟವಾಗಿ ಜನಮನ್ನಣೆಗಳಿಸಿದ್ದು, ಇದೀಗ ರಾಜ್ಯದ ಕೇಂದ್ರ ಗ್ರಂಥಾಲಯಕ್ಕೂ ಆಯ್ಕೆಯಾಗಿದೆ. ನಗರದ ಧಾರ್ಮಿಕ ಮತ್ತು ಸಾಂಸ್ಕೃತಿಕ ಕ್ಷೇತ್ರದ ಸೇವೆಯಲ್ಲಿಯೂ ತಮ್ಮ ಛಾಪನ್ನು ಮೂಡಿಸಿರುವ ಇವರು ಶ್ರೀಗಂಧ ಸಂಸ್ಥೆ, ಅಭೀಷ್ಟವರದ ಶ್ರೀ ಮಹಾಗಣಪತಿ ದೇವಸ್ಥಾನದ ಟ್ರಸ್ಟಿಯಾಗಿಯೂ ಕಾರ್ಯನಿರ್ವಹಿಸುತ್ತಿದ್ದು, ಹಲವಾರು ಸಂಘ ಸಂಸ್ಥೆಗಳಲ್ಲಿ ಪದಾಧಿಕಾರಿಗಳಾಗಿದ್ದಾರೆ.

ಅಂದಿನ ಮುಖ್ಯ ಅತಿಥಿಗಳಾದ ಶ್ರೀ ಕೆ.ಜಿ. ಕೃಷ್ಣಾನಂದರವರು ಪ್ರಸಕ್ತ ವಿದ್ಯಮಾನಗಳ ಬಗ್ಗೆ ಮಾತನಾಡುತ್ತಾ, ತಾನು ಮಾತುಗಾರ ಅಲ್ಲ. ನಾನೊಬ್ಬ ಬರಹಗಾರ ಎನ್ನುತ್ತಾ, ಮುಖ್ಯವಾಗಿ ಮನುಷ್ಯನಿಗೆ ಅರವತ್ತು ವರ್ಷಗಳ ನಂತರ ಸ್ನೇಹಿತರು ಸಿಗೋದಿಲ್ಲ. ಹಾಗೇ ಇಂದು ಸಿಕ್ಕಿರುವ ಅವಕಾಶದಿಂದ ತಾವುಗಳು ಮಿತ್ರರಾದರೆ ನನಗೆ ಸಂತೋಷ ಎಂದರು. ಈ ನಮ್ಮ ಭೂಮಿ ನಾವು ವಾಸಿಸುತ್ತಿರುವ ಗೆಲಾಕ್ಸಿಯ ಒಂದು ಚುಕ್ಕೆ ಮಾತ್ರ. ನಾವು ನಮ್ಮಅಹಮಿನಿಂದ ನಾವು ದೊಡ್ಡವರು ಎಂದುಕೊಂಡಿದ್ದೇವೆ. ಇದು ನಮ್ಮ ಪೂರ್ವಜರ ನಿಯಮದ ರೀತ್ಯಾ ತಪ್ಪು. ಈ ಜಗದಲ್ಲಿ ನಮ್ಮ ನಡಿಗೆ ನಿಧಾನವಿರಲಿ, ಜೋರಾಗಿರಲಿ ಕಾಲ ಮಾತ್ರ ಅದರ ನಿಯಮಕ್ಕನುಗುಣವಾಗಿಯೇ ನಡೆಯುತ್ತಲಿರುತ್ತದೆ. ಇವೆಲ್ಲಕ್ಕೂ ನಮಗೂ ಸಂಬಂಧವಿದೆ. ಜಗತ್ತಿನಲ್ಲಿ ಹಲವು ವೈಪರೀತ್ಯಗಳು ನಡೆಯುತ್ತಲೇ ಇದೆ. ಉದಾಹರಣೆಗೆ

## ಈ ವಾರದ ಸಭೆ

**ದಿನಾಂಕ: 31–12–2025, ಬುಧವಾರ** **ಸಂಜೆ 6:45 ಗಂಟೆಗೆ**

# ಕ್ಲಬ್ ಅಫೇರ್ಸ್

## ಕ್ಲಬ್‌ನ ಚಟುವಟಿಕೆಗಳ ಬಗ್ಗೆ ಚರ್ಚೆ

ದಯವಿಟ್ಟು ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ

ಸ್ಥಳ: **ರೋಟರಿ ಯುವ ಕೇಂದ್ರ,** ಸವಳಂಗ ರಸ್ತೆ, ಶಿವಮೊಗ್ಗ

















ಶಿವಮೊಗ್ಗದಲ್ಲಿ ಛಳಿ ಹೇಗಿದೆಯೋ ಹಾಗೆ ಬರಡು ಮರಳುಗಾಡಿನ, ಬಿಸಿಗಾಳಿಯ ಯುನೈಟೆಡ್ ಎಮಿರೇಟ್ಸ್‌ನ ಗಡಿಯಲ್ಲಿ ಹಿಮಪಾತ ವಾಗುತ್ತಿದೆ. ಥೈಲ್ಯಾಂಡ್ ಶ್ರೀಲಂಕಾ ಅಮೇರಿಕಾದ ಮುಂತಾದ ರಾಷ್ಟ್ರಗಳಲ್ಲಿ ಮಳೆಗಾಳಿಯಿಂದ ಜನಜೀವನ ಅಸ್ತವ್ಯಸ್ತವಾಗಿದೆ. ಇವೆಲ್ಲಕ್ಕೂ ಒಂದಕ್ಕೊಂದು ಸಂಬಂಧವಿದೆ ಎಂದರು.

ಯುದ್ಧಗಳು ನಿಂತಿವೆ ಎಂದರೂ, ಅಲ್ಲಲ್ಲಿ ಯುದ್ಧಗಳು ನಡೆಯುತ್ತಲೇ ಇವೆ. ಇವೆಲ್ಲ ವೈರುಧ್ಯಗಳ ನಡುವೆ ಪ್ರಸಕ್ತ ರಾಜಕೀಯ ಸನ್ನಿವೇಶವನ್ನು ಗಮನಿಸಿದರೆ ಡಿ.ವಿ.ಗುಂಡಪ್ಪನವರು ನೆನಪಾಗುತ್ತಾರೆ.

**ಚಾರು ದೃಶ್ಯಂಗಳಿಂ ಪ್ರೀತಿ ಹೃದಯ ವಿಕಾಸ।**
**ಕ್ರೂರದೌಷ್ಟ್ಯಗಳಿಂ ವೀರಾನುಕಂಪ।**
**ಭೈರವಾದ್ಭುತಗಳಿಂ ಮೌನದಂತರ್ಮನನ**
**ದಾರಿಯುದ್ಧಾರಕಿವು ಮಂಕುತಿಮ್ಮ॥**

ಜಗತ್ತಿನ ವಿದ್ಯಮಾನಗಳನ್ನು ಗಮನಿಸುತ್ತಾ ಒಳ್ಳೆಯ ಸಂಗತಿಗಳಿಂದ ನಮ್ಮ ಮನಸ್ಸನ್ನು ಪ್ರಫುಲ್ಲಗೊಳಿಸಿಕೊಳ್ಳಬೇಕಂತೆ. ತಾನು ಯಾವುದೇ ಪಕ್ಷದ ಬಗ್ಗೆ ಒಲವನ್ನು ಹೊಂದಿಲ್ಲ ಎಂದು ತಿಳಿಸಿದ ಅವರು, ನಮ್ಮ ದೇಶದ ಈಗಿನ ವಿದ್ಯಮಾನಗಳಿಗೆ ಬರೋಣ ಎಂದು ತಿಳಿಸುತ್ತಾ, ಮೋದಿ ಟೆಲಿಪ್ರಾಮ್ಟರ್ ಇಲ್ಲದೇ ಮಾತನಾಡಲು ಸಾಧ್ಯವಾಗುವುದಿಲ್ಲ, ಅವರೊಬ್ಬ ಅನಕ್ಷರಸ್ಥ ಎನ್ನುವವರ ನಡುವೆ ಅವರು ಕಳೆದ ಹನ್ನೆರಡು ವರ್ಷಗಳಿಂದ ಯಶಸ್ವಿಯಾಗಿ ಆಡಳಿತ ನಡೆಸುತ್ತಿದ್ದು, ಭಾರತದಲ್ಲಿ ರೂಪಾಂತರವನ್ನೇ ಮಾಡಿದ್ದಾರೆ. ಮೋದಿಯವರು ಮಾಡಿರುವ ಕೆಲಸಗಳನ್ನು ಒಂದೆರಡು ಗಂಟೆಗಳಲ್ಲಿ ಹೇಳಲು ಅಸಾಧ್ಯ. ವಿರೋಧಿಗಳು ವಿದೇಶದಲ್ಲಿ ವೋಟ್ ಚೋರಿ, ಎಸ್.ಐ.ಆರ್. ಮುಂತಾದುವುಗಳನ್ನು ಹಳಿಯುತ್ತಾ ಇದ್ದಾರೆ. ಆದರೆ ತಮ್ಮ ನೆಲದಲ್ಲೇ ಅದನ್ನು ವಿರೋಧಿಸಿದ್ದರೆ ನಮ್ಮ ಜನತೆ ಮೋದಿಯವರ ವಿರುದ್ಧವೇ ಓಟು ಹಾಕುತ್ತಿದ್ದರೇನೋ ಎಂದರು.

ಈಗ ನಮ್ಮ ಜಲ ನೆಲ ವಾಯು ಪ್ರದೇಶಗಳು ಬಲವಾಗುತ್ತಿದೆ. ಜಿಎಸ್ಟಿ ಜಾರಿಯಿಂದ ದೇಶದ ಆರ್ಥಿಕತೆ ದೊಡ್ಡದಾಗಿದೆ. ಸ್ವದೇಶಿ ನಿರ್ಮಿತ ಶಸ್ತ್ರಾಸ್ತ್ರಗಳಿಂದ ಭಯೋತ್ಪಾದಕರ ಹುಟ್ಟಡಗಿದೆ. ನಕ್ಸಲರು ಖಾಲಿಯಾಗಿ ನಗರ ನಕ್ಸಲರ ಉಪಟಳ ಕಡಿಮೆಯಾಗಿದೆ. ಈ ನಡುವೆ ಕೆಲವೊಂದು ಜನ ಮೋದಿಯವರು ನೂರಾರು ಲಕ್ಷ ಸಾಲ ಮಾಡಿದ್ದಾರೆ, ಏನು ಕಿಸಿದಿಲ್ಲ ಎನ್ನುವವರಿದ್ದಾರೆ. ಅವೆಲ್ಲವನ್ನೂ ಕೇಳಬೇಕು. ಏಕೆಂದರೆ ಪ್ರಜಾಪ್ರಭುತ್ವ ರಾಷ್ಟ್ರ ನಮ್ಮದು. ವಾಕ್ ಸ್ವಾತಂತ್ರವಿದೆ. ಷೇರು ಮಾರುಕಟ್ಟೆ ಜಿಗಿದಿದೆ. ದೇಶದ ಗಡಿಭಾಗಗಳು ಸುರಕ್ಷಿತವೆನಿಸಿವೆ. ಇದಕ್ಕೆ ಸುತ್ತಲ ಜನರ ಬೆಂಬಲ ಮುಖ್ಯವಾಗಿದೆ. ಜೊತೆಗೆ ಇತರ ದೇಶಗಳ ಬೆಂಬಲವೂ ಮುಖ್ಯವಾಗಿರುತ್ತದೆ. ಇದನ್ನೆಲ್ಲ ಗಮನಿಸಿದರೆ ಡಿವಿಜಿಯವರ ಹೇಳೋದು,

**ಗೃಹದಿ ರಾಷ್ಟ್ರದಿ ಸಮಾಜದಿ ಲೋಕ ಸಂಗತದಿ।**
**ವಿಹಿತದ ಸ್ಥಾನದಿಂ ಸಹಜಗುಣಬಲದಿಂದ।**
**ಇಹ ಪರ ಸಮನ್ವಯದೆ ಸರ್ವಹಿತ ಸಂಸ್ಥಿತಿಗೆ ।**
**ಸಹಕರಿಪುದಲೆಧರ್ಮ – ಮಂಕುತಿಮ್ಮ॥**

ಈ ದೇಶದಲ್ಲಿ ನಡೆಯೋ ಈ ಸಕಲ ಸಂಗತಿಗಳನ್ನೆಲ್ಲಾ ಸೂಕ್ಷ್ಮವಾಗಿ ಗಮನಿಸಬೇಕಾದ್ದು ನಮ್ಮ ಧರ್ಮ ಅಂತಾರೆ ಗುಂಡಪ್ಪನವರು.

ಈಗ ನಾವು ಪುಕ್ಕಟೆ ಯುಗದಲ್ಲಿದ್ದೇವೆ. ಇದರಿಂದ ರಾಜ್ಯದ ಸಾಲದ ಮೊತ್ತ 3 ಲಕ್ಷಕೋಟಿ ದಾಟಿದೆ. ಜೊತೆಗೆ ಕುರ್ಚಿಯ ಜಗಳಗಳಿಂದ ಅಭಿವೃದ್ಧಿ ಕಾರ್ಯಗಳ ಕುಂಟಿತವಾಗಿದೆ. ಅಸಂಬದ್ಧ ಕಾನೂನುಗಳಿಗೆ ಚಾಲನೆ ದೊರಕಿದೆ. ಹೀಗೆ ಸಾಗುತ್ತಿರುವ ರಾಜಕೀಯ ದೊಂಬರಾಟಗಳನ್ನು ನೋಡುತ್ತಿದ್ದೇವೆ.

ಇನ್ನು ನಮ್ಮ ಸಮಾಜದ ಬಗ್ಗೆ ನೋಡುವುದಾದರೆ.., ಸಮಾಜದಲ್ಲಿ ಶಾಂತಿ ಇರಬೇಕು. ನಮ್ಮ ಸುತ್ತಲಿನ ಪರಿಸರ ಶುದ್ಧವಾಗಿರಬೇಕು. ಸದ್ಯಕ್ಕೆ ಶಿವಮೊಗ್ಗದಲ್ಲಿ ಶುದ್ಧ ಗಾಳಿಯೊಂದೇ ಸಲೀಸಾಗಿ ದೊರಕುತ್ತಿದೆ ಎನ್ನುವುದು ಸಮಾಧಾನಕರ ಅಂಶವಾಗಿದೆ. ಮೊನ್ನೆ ಪತ್ರಿಕೆಯಲ್ಲಿ ಈ ಅಂಶ ಪ್ರಕಟವಾಗಿದೆ. ತುಂಗೆಯ ನೀರು ಕಲುಷಿತವಾಗಿದ್ದು, ಅಲ್ಯುಮಿನಿಯಂ ಅಂಶ ಅಧಿಕವಾಗಿದೆ. ಇವುಗಳನ್ನೆಲ್ಲಾ ನಾಗರೀಕರಾಗಿ ನಾವು ಗಮನಿಸಬೇಕಾಗಿದೆ.

**ನೀವು ಅತ್ಯುತ್ತಮ ರೋಟರಿ ಸದಸ್ಯರೆಂದಾದರೆ ಪ್ರತಿ ವಾರದ ಸಭೆಗೆ ತಪ್ಪದೇ ಬನ್ನಿ**

ನಮ್ಮ ಕುಟುಂಬಗಳ ಬಗ್ಗ ಹೇಳುವುದಾದರೆ, ಮೊದಲು ನಮ್ಮದು ಅವಿಭಕ್ತ ಕುಟುಂಬ ಹೊಂದಿರುವ ದೇಶವಾಗಿತ್ತು. ಅಡುಗೆಯ ಮನೆಯಲ್ಲಿ ಪಾತ್ರೆಗಳ ಸದ್ದು, ಮಾತಿನ ಶಬ್ದ ನಿಂತರೆ ದೇಶದ ಸಾಂಸ್ಕೃತಿಕ ಅಸ್ತಿತ್ವವೇ ನಶಿಸಿದಂತೆ. ಅಮೇರಿಕಾದಲ್ಲಿ ಇದು ಆಗಿದೆ. ಜೊಮಾಟೋ, ಸ್ವಿಗ್ಗಿಗಳು ಆ ಸ್ಥಾನ ತುಂಬಿವೆ. ಕುಟುಂಬ ವ್ಯವಸ್ಥೆ ಹಾಳಾಗ್ತಿದೆ. ಅಜ್ಜ ಅಜ್ಜಿ ಸೀನಿಯರ್ ಕೇರ್ ಯುನಿಟ್‌ನಲ್ಲಿದ್ದಾರೆ. ಅಪ್ಪ ಅಮ್ಮ ಮನೆಯಲ್ಲಿದ್ದಾರೆ. ಮಕ್ಕಳು ಹ್ಯಾಪಿ ಲಿವಿಂಗ್ ಫೇರ್‌ನಲ್ಲಿದ್ದಾರೆ. ಮನೆಯಲ್ಲಿ ಅಜ್ಜ ಅಜ್ಜಿ ಮೊಮ್ಮಕ್ಕಳಿಗೆ ಕಥೆ ಹೇಳುವ ಗುನುಗಿಲ್ಲ. ಒಟ್ಟಿಗೆ ಕುಳಿತು ಊಟ ಮಾಡುವ ವ್ಯವಸ್ಥೆಯಿಲ್ಲ. ಮೊಬೈಲ್‌ನಿಂದ ಪರಸ್ಪರ ಮಾತುಕತೆ ಮತ್ತು ಸಂವೇದನೇ ಇಲ್ಲ. ದೇಶ ಸಾಂಸ್ಕೃತಿಕವಾಗಿ ಸಾಯುತ್ತಿದೆ. ನಮ್ಮ ದೇಶದಲ್ಲೂ ಅದೇ ಕತೆ ಮುಂದುವರೆದಿದೆ. ಶಿವಮೊಗ್ಗದಲ್ಲಿ ಹೋಟೇಲುಗಳ ಸಂಖ್ಯೆ ವೃದ್ಧಿಯಾಗಿದೆ.

ಎಪ್ಪತ್ತರ ದಶಕದ ನಾವಿಬ್ಬರು ನಮಗಿಬ್ಬರು ಘೋಷಣೆಯ ಅನುಷ್ಠಾನದಿಂದ ಕುಟುಂಬ ವ್ಯವಸ್ಥೆ ಹರಣದಿಂದ ಮನೆಯ ಒಟ್ಟು ಸದಸ್ಯರ ಸಂಖ್ಯೆ 3 ಅಥವಾ 4 ಕ್ಕೆ ಬಂದಿದೆ. ವೃದ್ಧ ತಂದೆ ತಾಯಿಗಳು ಮಾತ್ರ ನಮ್ಮ ಮನೆಗಳಲ್ಲಿರುತ್ತಾರೆ. ಈಗ ಶಿವಮೊಗ್ಗ ವೃದ್ಧಾಶ್ರಮದ ಬೀಡಾಗಿದೆ. ಮಕ್ಕಳಿಗೆ ಸಂಬಂಧದ ಸೆಳೆತವಿಲ್ಲ. ಭಾಂಧವ್ಯದ ಮಮತೆಯಿಲ್ಲ. ನೆಂಟಸ್ತನದ ಅರಿವು ಅದರ ಸುಖದ ಅರಿವಿಲ್ಲ. ಮನೆ ಕಟ್ಟಡವಾಯ್ತು ಹೊರತು ಸಂಬಂಧದ ಬೀಡಾಗಲಿಲ್ಲ. ಅದನ್ನು ಹುಡುಕಬೇಕಾದ ಸಮಯವಿದಾಗಿದೆ.

ಈ ಜಗತ್ತಿನ ಒಟ್ಟು ಸ್ವರೂಪವೇ ನಾವು ನೀವು. ಅತ್ಯಂತ ಪ್ರಮುಖ ಪಾತ್ರಧಾರಿಗಳು ನಾವು. ನಮ್ಮ ನಡೆ ನುಡಿಕ್ರಿಯೆ ಪ್ರತಿಕ್ರಿಯೆ ಜಗತ್ತನ್ನು ನಿಯಂತ್ರಿಸುತ್ತದೆ. ಅದನ್ನು ಡಿವಿಜಿಯವರು ತಮ್ಮ ಮುಕ್ತಕದಲ್ಲಿ ಈ ರೀತಿ ತಿಳಿಸಿದ್ದಾರೆ.

**ನಿನ್ನೆಂಜಲಗುಳಾವ ಕಾಲುವೆಯ ಸೇರುವುದೋ।**
**ಮಣ್ಣಾವುದದರಿಂದೆಗರ್ಭವತಿಯಹುದೋ।**
**ಅನ್ನುವದರಿಂದಾರ್ಗೊ! ಲೋಕಕವರಿಂದೇನೋ।**
**ಬಣ್ಣಿಸುವರಾರದನು? ಮಂಕುತಿಮ್ಮ॥**

ಎನ್ನುತ್ತಾ ನಮ್ಮೊಳಗಿನ ಜೈವಿಕಗಡಿಯಾರ ನಡೆಸುವ ಹೃದಯ ಬಡಿತದ ಗತಿಯನ್ನು ಗಮನಿಸೋಣ. ಸಹೃದಯ ಸಮಾಜವನ್ನು ನಿರ್ಮಿಸೋಣ ಎಂದು ತಿಳಿಸುತ್ತಾ ತಮ್ಮ ಮಾತಿಗೆ ವಿರಾಮ ನೀಡಿದರು. ರೊ. ಎಂ.ಮಾಧವಾಚಾರ್‌ರವರು ಕೆಲವೊಂದು ಪ್ರಶ್ನೆಯನ್ನು ಮುಖ್ಯ ಅತಿಥಿಗಳಿಗೆ ಕೇಳಿ ಅವರ ಅಭಿಪ್ರಾಯ ಪಡೆದರು. ಅಧ್ಯಕ್ಷರಾದ ರೊ.ಆರ್.ಆನಂದರವರೂ ಸಹ ಉದಾಹರಣೆ ಯೊಂದನ್ನು ನೀಡಿ, ಮುಖ್ಯ ಅತಿಥಿಗಳ ಮಾತಿಗೆ ದನಿಗೂಡಿಸಿದರು. ಅವರಿಗೆ ಕೃತಜ್ಞತಾ ಪೂರ್ವಕವಾಗಿ ನೆನಪಿನ ಕಾಣಿಕೆಯನ್ನು ನೀಡಿ ಗೌರವಿಸಿದರು.

ಕೊನೆಯಲ್ಲಿ ಅಂದಿನ ಸಭಾ ಕಾರ್ಯದರ್ಶಿ ಹಾಗೂ ಕ್ಲಬ್‌ನ ಸಹ ಕಾರ್ಯದರ್ಶಿ ರೊ.ಶ್ರೀಕಾಂತ್ ನಾಡಿಗ್‌ರವರು ವಂದನಾರ್ಪಣೆ ಮಾಡಿದರು.




## Wedding Anniversary

| | |
|---|---|
| Dr. Shivakumar M.C. & Shruthi | 1st Dec. |
| Rakesh Gowda & Shruthi | 2nd Dec. |
| Dr. Kanchan Kulkarni & Dr. Vadiraj Kulkarni | 3rd Dec. |
| B.N.Sathyanarayana & Sumithra | 4th Dec. |
| Dr. Raksha Rao & Dr. Uday R.Rao | 9th Dec. |
| M.P. Pawan & Anjali | 11th Dec. |
| Aravind D.C. & Anupama | 12th Dec. |
| R. Anand & Laxmi | 14th Dec. |
| D.P. Mohan & Suneetha | 15th Dec. |
| C.B.Veeranna & Chaya | 16th Dec. |
| Dr. Mythili & Dr. Roshan | 18th Dec |
| Deepak Kori & Vidyarani | 19th Dec |
| Dr. RajaniPai & Late Dr. K.A.AshokPai | 20th Dec |
| D.S.Nataraj & Padma | 21st Dec |
| Dr. PuneethIsloor & Dr. RamyaNayak | 27th Dec |



## Happy Birthday Wishes



Shashidhar N.G.
30th Dec





Laxmidevi Gopinath
31st Dec



ಸಂಪಾದಕೀಯ



## ನೆಲಮುಗಿಲಿನ ಮಧ್ಯೆ

ಹದ್ದುಗಳ ನಡತೆಯೇ ಭಿನ್ನ. ಅವು ಗಿಳಿ, ಗುಬ್ಬಿ, ಕಾಗೆಗಳ ಹಾಗೆ ವಟ ವಟ ಗುಟ್ಟುವುದಿಲ್ಲ; ಸಾಧನೆಗೆ ಕೂತ ಮೌನ ತಪಸ್ವಿಯ ಹಾಗೆ ಅಥವಾ ಸಾಧಕರ ಹಾಗೆ ಕಾಣುತ್ತವೆ. ಲೋಕದ ಗದ್ದಲ ಎಲ್ಲ ಗೊತ್ತು. ಆದರೂ ಆಕಾಶದ ಸಖ್ಯ; ನೀರವ ಮತ್ತು ಎತ್ತರದ ಯಾನ, ಸಂತೆಯ ಜೊತೆಗೆ ಅಂಟಿಕೊಂಡಿದ್ದರೂ ಸಂತ ತನದ ಧ್ಯಾನ. ಬಾಳು ಮತ್ತು ಸಂಬಂಧಗಳನ್ನು ಒಂದಿಷ್ಟು ಅಂತರಗಳಲ್ಲಿ ಇಟ್ಟು ಪರಿಭಾವಿಸುವಂತೆ ಕಾಣುತ್ತದೆ ಹದ್ದಿನ ನಡೆ. ಎಷ್ಟು ಎತ್ತರ ಹಾರಿದರೂ ಊಟಕ್ಕೆ, ಹಸಿವಿಗೆ ನೆಲಕ್ಕೆ ಬರಲೇಬೇಕು. ಡೌನ್ ಟು ಅರ್ಥ್ ಅಂತೀವಲ್ಲ ಹಾಗೆ. ಎಲ್ಲಕ್ಕೂ ಅದರದ್ದೇ ಒಂದು ವಿಶೇಷತೆ ಇದೆ. ಮೀನು ಆಕಾಶದಲ್ಲಿ ಹಾರಲಾರದು, ಹದ್ದು ನೀರಿನಲ್ಲಿ ಈಜಲಾರದು. ಪ್ರತಿ ಜೀವಕ್ಕೂ ಒಂದು ಗೌರವ, ಘನತೆ ಮತ್ತು ಅರ್ಥವಿದೆ. ಕುವೆಂಪು ಇದನ್ನೇ 'ಗೌರವಿಸು ಜೀವನವ ಗೌರವಿಸು ಚೇತನವ' ಅಂತ ಹೇಳಿದ್ದು. ಮರದಲ್ಲಿ ನೆಲ್ಲಿಕಾಯಿ, ಬಳ್ಳಿಯಲ್ಲಿ ಕುಂಬಳಕಾಯಿ ಇರುವುದು. ಹದ್ದಿನ ಬಾಳಿನ ಹದ್ದೇ ವಿಸ್ತಾರವಾದದ್ದು ನೆಲ ಮತ್ತು ಮುಗಿಲಿನ ಮಧ್ಯದ ಪರ್ಯಟನ ಅದು.

ನಮ್ಮ ಬಾಳೂ ಕೂಡಾ ಹೀಗೆ; ಸಾಧ್ಯತೆಗಳನ್ನು ಅವಲಂಬಿಸಿದೆ. ಕನಸುಗಳನ್ನು ಸಲಹಬಲ್ಲುದೇ ವಿನಾ ಎಲ್ಲವೂ ನನಸಾಗದು. ಪ್ರಯತ್ನವಂತೂ ಸದಾ ಜಾರಿಯಲ್ಲೇ ಇರಬೇಕು. ಜೀವ ಮತ್ತು ಶಕ್ತಿಗೆ ತಕ್ಕ ಹಾಗೆ ಸಾಧ್ಯತೆಗಳು. ನಮ್ಮ ನಮ್ಮ ಪರಿಮಿತಿಗಳನ್ನು ಕರಾರುವಾಕ್ಕಾಗಿ ಅರಿಯುವುದೂ ಕೂಡ ವಿವೇಕವೇ ಅನಿಸುತ್ತದೆ. ಆದರೆ, ಹದ್ದಿನ ಮಾತೇ ಬೇರೆ. ಏರು ಮತ್ತು ಇಳಿ ವ್ಯಾಪಕವಾದುದು. ಸದಾ ಸುರಕ್ಷಿತ ವಲಯವನ್ನು ಧಿಕ್ಕರಿಸುವ ಹದ್ದುಗಳು ತಮ್ಮ ಮರಿಗಳಗೂ ಮುಳ್ಳು ಬೆಣಚು ಕಲ್ಲುಗಳ ಮೇಲೆ ನಿಲ್ಲಿಸಿ ಹಾರಲು ಕಲಿಸುತ್ತವೆ.

ಆ ಮರಿಗಳು ಕುಪ್ಪಳಿಸಿ ಕುಪ್ಪಳಿಸಿ ಹಾರುತ್ತವೆ; ವಿಸ್ತಾರವಾದ ಕಣಿವೆ ಕಂದಕ ಬೆಟ್ಟ ತಪ್ಪಲು ಕಾಡುಗಳ ಮೇಲೆ ದಣಿವಿರದೆ ನಿರಂತರ. ಬಿದ್ದಲ್ಲೇ ಹಾಸಿಗೆ ಮೇಲೆ ಬಿದ್ದಿದ್ದರೆ ಈ ಎತ್ತರ ಸಾಧ್ಯವೇ ಇಲ್ಲ.

ಹದ್ದುಗಳು ಕೂಡಾ ದಣಿಯುತ್ತವೆ, ಹಣ್ಣಾಗುತ್ತವೆ; ಹಾಗಂತ ಕುಸಿಯುವುದಿಲ್ಲ. ಬಾಳಿನ ಸಾಧ್ಯತೆಗಳನ್ನು ಮೊಟಕುಗೊಳಿಸುವುದಿಲ್ಲ. ವಯಸ್ಸಾದಾಗ ಭಾರವಾದ ಮತ್ತು ಅಶಕ್ತ ರೆಕ್ಕೆಗಳನ್ನು ತಾವೇ ಕಿತ್ತು ಎಸೆಯುತ್ತವೆ. ಕೊಕ್ಕನ್ನು ಬಂಡೆಗಲ್ಲಿಗೆ ಉಜ್ಜಿ ಮೊನಚು ಗೊಳಿಸಿಕೊಳ್ಳುತ್ತವೆ. ಪಾದ ಉಗುರುಗಳನ್ನು ಮಸೆದುಕೊಳ್ಳುತ್ತವೆ. ಮತ್ತೆ ಹಗುರಾಗಿ ಹೊಸದಾಗಿ ಹಾರಲು ಅಣಿಯಾಗುತ್ತವೆ.

ಬದುಕು ಮುಗಿಯುವುದಿಲ್ಲ. ನಾವು ಮುಗಿಸಿಕೊಳ್ಳುತ್ತೇವೆ ಅಷ್ಟೆ. ಆದರೆ ಹದ್ದುಗಳು ಬಾಳನ್ನು ಮುಗಿಯಗೊಡಲು ಬಿಡದೆ ವಿಸ್ತರಿಸಿಕೊಳ್ಳುತ್ತವೆ. ನಿರುತ್ಸಾಹ, ವಿಷಾದ, ವೃದ್ಧಾಪ್ಯ, ಅಶಕ್ತತೆ, ಅಸಾಧ್ಯತೆ ಎಂದೆಲ್ಲ ಗೊಣಗುವ ನಮಗೆ ಹದ್ದಿನ ಈ ಹದ್ದು ಬಹುದೊಡ್ಡ ಪಾಠ.

• ರೊ. ಎಂ. ಮಾಧವಾಚಾರ್

## ಚತುರ್ವಿಧ ಪರೀಕ್ಷೆ

ನಮ್ಮ ಚಿಂತನೆ, ಆಡುವ ಮಾತು ಅಥವಾ ಕೃತಿಗಳಲ್ಲಿ

01 ಇದು ಸತ್ಯವೇ?

02 ಇದು ಸಂಬಂಧಪಟ್ಟ ಎಲ್ಲರಿಗೆ ನ್ಯಾಯ ಸಮ್ಮತವೇ?

03 ಇದು ಸದ್ಭಾವನೆ ಮತ್ತು ಉತ್ತಮ ಸ್ನೇಹ ಸಂಬಂಧವನ್ನು ಬೆಳೆಸಬಲ್ಲದೇ?

04 ಇದು ಸಂಬಂಧಪಟ್ಟ ಎಲ್ಲರಿಗೆ ಪ್ರಯೋಜನಕಾರಿಯೇ?

## ಬಾಯಿಯ ದುರ್ವಾಸನೆ ಹೋಗಲಾಡಿಸಲು ಮನೆಯಲ್ಲಿಯೇ ಮಾಡಬಹುದಾದ ಸುಲಭ ಮತ್ತು ಪರಿಣಾಮಕಾರಿ ಉಪಾಯಗಳು

*(Home Remedies for Bad Breath or Hallitosis)*

**ರೊ. ಡಾ. ಕಾಂಚನ್ ಕುಲಕರ್ಣಿ,** ಬಿ.ಎ.ಎಂ.ಎಸ್. ಎಂ.ಡಿ. ಪಿಜಿಡಿಸಿಸಿಟಿ
**ಪಂಚಮಿ ಆಯುರ್ವೇದ ಚಿಕಿತ್ಸಾ ಕೇಂದ್ರ, ಕುವೆಂಪು ರಸ್ತೆ, ಶಿವಮೊಗ್ಗ**

- **ಲವಂಗ (Cloves)** : ಒಂದು ಲವಂಗವನ್ನು ಇಟ್ಟುಕೊಂಡು ಅಗಿಯುವುದರಿಂದ ಅದರಲ್ಲಿರುವ ಆಂಟಿ–ಬ್ಯಾಕ್ಟೀರಿಯಲ್ ಗುಣಗಳು ದುರ್ವಾಸನೆಯನ್ನು ಹೋಗಲಾಡಿಸುತ್ತವೆ.
- **ಸೋಂಪು ಕಾಳು (Fennel Seeds)** : ಊಟವಾದ ನಂತರ ಸ್ವಲ್ಪ ಸೋಂಪು ಕಾಳನ್ನು ಅಗಿಯಿರಿ. ಇದು ಜೀರ್ಣಕ್ರಿಯೆಗೆ ಸಹಕಾರಿ ಮತ್ತು ಬಾಯಿಯನ್ನು ತಾಜಾವಾಗಿಡುತ್ತದೆ.
- **ಏಲಕ್ಕಿ (Cardamom)** : ಏಲಕ್ಕಿಯನ್ನು ಅಗಿಯುವುದರಿಂದ ಅದರ ಸುವಾಸನೆಯು ಬಾಯಿಯ ವಾಸನೆಯನ್ನು ತಕ್ಷಣವೇ ಕಡಿಮೆ ಮಾಡುತ್ತದೆ.
- **ದಾಲ್ಚಿನ್ನಿ(Cinnamon)** : ದಾಲ್ಚಿನ್ನಿ ಪುಡಿಯನ್ನು ನೀರಿಗೆ ಹಾಕಿ ಬಾಯಿ ಮುಕ್ಕಳಿಸುವುದು ಕೂಡ ಬಹಳ ಪರಿಣಾಮಕಾರಿ
- **ಬಾಯಿ ಮುಕ್ಕಳಿಸುವುದು (Rinsing)** : ಉಗುರು ಬೆಚ್ಚಗಿನ ನೀರಿಗೆ ಸ್ವಲ್ಪ ಉಪ್ಪು ಹಾಕಿ ಬಾಯಿ ಮುಕ್ಕಳಿಸುವುದರಿಂದ ಬಾಯಿಯಲ್ಲಿರುವ ಬ್ಯಾಕ್ಟೀರಿಯಗಳು ನಾಶವಾಗುತ್ತವೆ.
- **ಆಪಲ್ ಸೈಡರ್ ವಿನೆಗರ್**: ಒಂದು ಲೋಟ ನೀರಿಗೆ ಒಂದು ಚಮಚ ಆಪಲ್ ಸೈಡರ್ ವಿನೆಗರ್ ಬೆರೆಸಿ ಕುಡಿಯುವುದು ಅಥವಾ ಬಾಯಿ ಮುಕ್ಕಳಿಸುವುದು ವಾಸನೆ ಹೋಗಲಾಡಿಸಲು ಉತ್ತಮ.
- **ಗ್ರೀನ್ ಟೀ (Green Tea)** : ಇದರಲ್ಲಿರುವ ಆಂಟಿ–ಆಕ್ಸಿಡೆಂಟ್ ಗುಣಗಳು ಬಾಯಿಯ ಆರೋಗ್ಯಕ್ಕೆ ಬಹಳ ಒಳ್ಳೆಯದು.
- **ನೀರು** : ಬಾಯಿ ಒಣಗುವುದರಿಂದ ಬ್ಯಾಕ್ಟೀರಿಯಾಗಳು ಹೆಚ್ಚಾಗಿ ವಾಸನೆ ಬರುತ್ತದೆ. ಆದ್ದರಿಂದ ದಿನವಿಡೀ ಸಾಕಷ್ಟು ನೀರು ಕುಡಿಯಿರಿ.
- **ಲಿಂಬೆ ರಸ** : ಒಂದು ಲೋಟ ನೀರಿಗೆ ಸ್ವಲ್ಪ ಲಿಂಬೆ ರಸ ಸೇರಿಸಿ ಬಾಯಿ ಮುಕ್ಕಳಿಸಿದರೆ ಬ್ಯಾಕ್ಟೀರಿಯಾಗಳು ದೂರವಾಗುತ್ತವೆ.
- **ನಾಲಿಗೆ ಶುಚಿಗೊಳಿಸುವುದು** : ಪ್ರತಿದಿನ ಹಲ್ಲು ಉಜ್ಜುವಾಗ ನಾಲಿಗೆಯನ್ನು ಮರೆಯದೆ ಶುಚಿಗೊಳಿಸಿ, ಬ್ಯಾಕ್ಟೀರಿಯಗಳು ಹೆಚ್ಚಾಗಿ ನಾಲಿಗೆಯ ಮೇಲೆಯೇ ಇರುತ್ತವೆ.

**ಗಮನಿಸಿ:–**

ಒಂದು ವೇಳೆ ಈ ಎಲ್ಲಾ ಕ್ರಮಗಳನ್ನು ಅನುಸರಿಸಿದ ನಂತರವೂ ವಾಸನೆ ಕಡಿಮೆಯಾಗದಿದ್ದರೆ, ಅದು ಹಲ್ಲಿನ ಸಂಬಂಧಿತ ಸಮಸ್ಯೆ ಅಥವಾ ಜೀರ್ಣ ಕ್ರಿಯೆಯ ಸಮಸ್ಯೆಯಾಗಿರಬಹುದು. ಆಗ ಒಮ್ಮೆ ದಂತವೈದ್ಯರನ್ನು ಅಥವಾ ಆಯುರ್ವೇದ ವೈದ್ಯರನ್ನು ಸಂಪರ್ಕಿಸುವುದು ಉತ್ತಮ.



**ಮುದ್ದುರಾಮನ ಚೌಪದಿ...**

ಕಾತರದ ಉರಿ ಆರಿ, ತಂಗಾಳಿ ತೂರಿಬರೆ
ಮನೆ ತೊರೆಯ ಮೇಲೆಲ್ಲ ತಿಳಿ ತಿಳಿವು ಆಗ.
ಕರಿಮುಗಿಲು ಸರಿದತ್ತ ನೆಮ್ಮದಿಯ ರವಿ ಬೆಳಕು
ಕಾಯುವುದು ಅನಿವಾರ್ಯ – ಮುದ್ದುರಾಮ

To,

*Book Post*

ಮುದ್ರಣ: ರಾಯಲ್ ಪ್ರಿಂಟರ್ಸ್, ಶಿವಮೊಗ್ಗ, 98862 73495